## ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ
## ಸಿ.ಸಿ ನಂ.739/2023

| ಪಿರ್ಯಾದಿದಾರರುಃ | ವಿರುದ್ಧ | ಆರೋಪಿತರು |
|---|---|---|
| ಸರಕಾರದ ಪರವಾಗಿ ಹರಿಹರ ಗ್ರಾಮಾಂತರ ಪೋಲಿಸ್ ಠಾಣೆ | | 1) ಸುರೇಶ, 50 ವರ್ಷ, ವ್ಯಾಪಾರಸ್ಥರು, ವಾಸಃ ಡೋರ್ ನಂ.3111-32, 5 ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.<br>2) ಬಸಣ್ಣ ತಂದೆ ಹುಚ್ಚಣ್ಣಪ್ಪ ಹಾರೋಗೇರಿ, 47 ವರ್ಷ, ಅಟೆಂಡರ್, ವಾಸಃ ಆಕಾಶ್ ರೈಸ್ ಮಿಲ್ ಇಂಡಸ್ಟ್ರೀಸ್, ಹರಿಹರ ತಾಲ್ಲೂಕು, ದಾವಣಗೆರೆ.<br>3) ಗಿರೀಶ್ ತಂದೆ ಸಂಗಣ್ಣಬಸಪ್ಪ, 35 ವರ್ಷ, ಅಟೆಂಡರ್, ವಾಸಃ ಆಕಾಶ್ ರೈಸ್ ಮಿಲ್ ಇಂಡಸ್ಟ್ರೀಸ್, 3 ನೇ ಕ್ರಾಸ್, ಇಡಬ್ಲ್ಯೂಎಸ್ ಕಾಲೋನಿ, ದಾವಣಗೆರೆ. |

### ದಂಡ ಪ್ರಕ್ರಿಯಾ ಕಲಂ **313** ರ ಅಡಿ ಆರೋಪಿತನ ಹೇಳಿಕೆ

ಪ್ರಶ್ನೆಃ 1 ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ

ಆ.1 :

ಆ.2 :

ಆ.3 :

ಪ್ರಶ್ನೆಃ 2 ಫ್ರಾಸಾ.1 ಸುಚಿತ್ರಾ ಇವರು ತಮ್ಮ ಸಾಕ್ಷ್ಯದಲ್ಲಿ, ಮೃತ ಸಂದೀಪ ಕುಮಾರ ತನ್ನ ಗಂಡ ಎಂದು, ತನ್ನ ಗಂಡ ಮಿಟ್ಲಕಟ್ಟೆ ಗ್ರಾಮದಲ್ಲಿರುವ ಆಕಾಶ್ ರೈಸ್ ಮಿಲ್ ನಲ್ಲಿ ಕೆಲಸ ಮಾಡುತ್ತಿರುವುದಾಗಿ, ಸುಮಾರು 1 ವರೆ ವರ್ಷಗಳ ಹಿಂದೆ ತನ್ನ ಭಾವ ರವರಿಗೆ, ತನ್ನ ಗಂಡ ರೈಸ್ ಮಿಲ್ ನಲ್ಲಿ ಕೆಲಸ ಮಾಡುವಾಗ ವಿದ್ಯುಚ್ಛಕ್ತಿ ತಗಲಿ ಮೃತಪಟ್ಟಿರುತ್ತಾರೆ ಎಂದು ಯಾರೊ ದೂರವಾಣಿ ಕರೆ ಮಾಡಿ ತಿಳಿಸಿದ್ದು, ಸದರಿ ವಿಷಯವನ್ನು ತನ್ನ ಭಾವ ತನಗೆ ತಿಳಿಸಿರುವುದಾಗಿ, ಆಗ ತಾನು ಮನೆಯಲ್ಲಿ ಇದ್ದು ವಿಷಯ ತಿಳಿದ ನಂತರ ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ಹೋಗಿ ನೋಡಲಾಗಿ, ತನ್ನ ಗಂಡ ಮೃತ ಪಟಪ್ಪಿರುವುದು ಕಂಡುಬಂದಿರುವುದಾಗಿ, ನಂತರ ಮಾರನೆ ದಿನ ಪೊಲೀಸ್ ಠಾಣೆಗೆ ಹೋಗಿ ದೂರನ್ನು

ದಾಖಲಿಸಿರುವುದಾಗಿ, ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.1(ಎ) ಎಂದು ಗುರುತಿಸುವುದಾಗಿ ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಆ.3 :

ಪ್ರಶ್ನೆಃ 3 ಫ್ರಾಸಾ.10 ಚಿನ್ಮಯಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 18.03.2023 ರಂದು ಹರಿಹರ ಗ್ರಾಮಾಂತರ ಪೊಲೀಸರು ಆಕಾಶ ರೈಸ್ ಇಂಡಸ್ಟ್ರೀಸ್ ಮಲೆಬೆನ್ನೂರು, ಹರಿಹರ ದಿನಾಂಕಃ 07.02.2023 ರಂದು ಆಕಾಶ ರೈಸ್ ಇಂಡಸ್ಟ್ರೀಸ್ ನಲ್ಲಿ ನಡೆದ ಘಟನೆಯ ಬಗ್ಗೆ ಸ್ಥಳ ಪರಿಶೀಲಿಸಿ ವರದಿಯನ್ನು ನೀಡಲು ಮನವಿ ನೀಡಿದ್ದರು. ದಿನಾಂಕಃ 09.02.2023 ರಂದು ಸ್ಥಳ ಪರಿವೀಕ್ಷಣೆ ಮಾಡಿ ಸ್ಥಳ ಪರಿಶೀಲನಾ ವರದಿ ಮತ್ತು ಸ್ಥಳ ಕಚ್ಚಾ ನಕಾಶೆಯನ್ನು ಪೊಲೀಸರಿಗೆ ನೀಡಿರುವುದಾಗಿ, ಸಾಕ್ಷಿಯು ಗುರುತಿಸಿದ ಪತ್ರ, ಕಚ್ಚಾ ನಕಾಶೆ ಮತ್ತು ವರದಿಯನ್ನು ಕ್ರಮವಾಗಿ ನಿಪಿ.11, ನಿಪಿ. 12 ಮತ್ತು ನಿಪಿ.13 ಎಂದು ಸಾಕ್ಷಿಯ ಸಹಿಗಳನ್ನು ನಿಪಿ.11 (ಎ), ನಿಪಿ.12 (ಎ) ಮತ್ತು ನಿಪಿ. 13(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು True copy ಯನ್ನು ಸಲ್ಲಿಸಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಆ.3 :

ಪ್ರಶ್ನೆಃ 4 ಫ್ರಾಸಾ.11 ನಾಗರಾಜ ನಾಯ್ಕ .ಸಿ. ಇವರು ತಮ್ಮ ಸಾಕ್ಷ್ಯದಲ್ಲಿ, ಹರಿಹರ ಗ್ರಾಮಾಂತರ ಠಾಣೆಯಿಂದ ಮಿಟ್ಲಕಟ್ಟೆ ಗ್ರಾಮದಿಂದ ಆಕಾಶ ರೈಸ್ ಇಂಡಸ್ಟ್ರಿಯಲ್ಲಿ ವಿದ್ಯುತ್ ಸರಬರಾಜು ಇದೆ ಅಥವಾ ಇಲ್ಲವೇ ಎಂದು ಪರಿಶೀಲನೆ ಮಾಡಿ ವರದಿ ನೀಡಲು ಕೋರಲು ಅದರಂತೆ ತಾನು ದಿನಾಂಕಃ 07.02.2023 ರಂದು ಮಧ್ಯಾಹ್ನ 02 ಗಂಟೆಯಿಂದ 02.30 ರವರೆಗೆ ಮಿಟ್ಲಕಟ್ಟೆ ಗ್ರಾಮದ ಆಕಾಶ ರೈಸ್ ಇಂಡಸ್ಟ್ರಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ವಿದ್ಯುತ್ ಸರಬರಾಜು ಮಾಡುವ ದೇವರಬೆಳಕೆರೆಗೆ 66/11 ಕೆವಿ ವಿ ವಿ ಕೇಂದ್ರದ ಎಫ್ 5 ಮಿಟ್ಲಕಟ್ಟೆ ಕೈಗಾರಿಕೆ ಫೀಡರನ 11 ಕೆವಿ ಮಾರ್ಗವು ಚಾಲನೆಯಲ್ಲಿರುತ್ತದೆ ಎಂದು ವರದಿ ನೀಡಿರುವುದಾಗಿ, ಸಾಕ್ಷಿಯು ಗುರುತಿಸಿದ ವರದಿಯನ್ನು ನಿಪಿ.15 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಿ ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಆ.3 :

ಪ್ರಶ್ನೆಃ 5 ಫ್ರಾಸಾ.12 ಜಿ.ಎನ್. ರಮೇಶ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ: 08.02.2023 ರಂದು ದಾವಣಗೆರೆ ಸಿ ಜೆ ಆಸ್ಪತ್ರೆಯಲ್ಲಿ ಶವಪಂಚನಾಮೆ ಕಾಲಕ್ಕೆ ಛಾಯ ಚಿತ್ರ ತೆಗೆದಿರುತ್ತೇನೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ನಿಪಿ.16 ರಿಂದ ನಿಪಿ.18 ಎಂದು ಗುರುತಿಸಲಾಯಿತು. ದಿನಾಂಕಃ 11.02.2023 ರಂದು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಜರುಗಿಸುವ ಕಾಲಕ್ಕೆ ಛಾಯ ಚಿತ್ರ ತೆಗೆದಿರುವುದಾಗಿ, ಸಾಕ್ಷಿಯು ಗುರುತಿಸಿದ ಛಾಯ ಚಿತ್ರವನ್ನು ನಿಪಿ.3 ಮತ್ತು ನಿಪಿ.4 ಎಂದು ಗುರುತಿಸಲಾಗಿದೆ. ಈ ಬಗ್ಗೆ 65 (ಬಿ ) ಪ್ರಮಾಣ ಪತ್ರವನ್ನು ಪಡೆದಿದ್ದು, ಸಾಕ್ಷಿಯು ಗುರುತಿಸಿದ 65 (ಬಿ) ಪ್ರಮಾಣ ಪತ್ರವನ್ನು ನಿಪಿ.19 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಿ ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಆ.3 :

ಪ್ರಶ್ನೆಃ 6 ಫ್ರಾಸಾ.13 ಎಸ್ ರಾಮಚಂದ್ರಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ: 08.02.2023 ರಂದು ಬೆಳಗ್ಗೆ 11.30 ಗಂಟೆಗೆ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಗುನ್ನೆ ನಂ.26/2023 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ, ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಪ್ರ.ವ.ವರದಿಯನ್ನು ನಿಪಿ.20 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು. ಅದೇ ದಿನ ಮಧ್ಯಾಹ್ನ 1 ಗಂಟೆಗೆ ಸಿಜಿ ಆಸ್ಪತ್ರೆಗೆ ತೆರಳಿ ಚಾಸಾ.8 ಮತ್ತು 9 ರವರ ಸಮಕ್ಷಮ ಮಧ್ಯಾಹ್ನ 1.30 ರಿಂದ 2 ಗಂಟೆವರೆಗೆ ಮೃತ ಸಂದೀಪ್ ನ ಶವಪಂಚನಾಮೆ ಜರುಗಿಸಿದ್ದು ಹಾಗೂ ಸದರಿ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆದಿರುವುದಾಗಿ, ಸಾಕ್ಷಿಯು ಗುರುತಿಸಿದ ಶವ ತನಿಖಾ ವರದಿಯನ್ನು ನಿಪಿ.21 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಛಾಯಾಚಿತ್ರಗಳನ್ನು ನಿಪಿ.16 ರಿಂದ 18 ರವರೆಗೆ ಗುರತಿಸಲಾಗಿದೆ. ಶವ ಪಂಚನಾಮೆ ಕಾಲಕ್ಕೆ ಮೃತನ ಸಂಬಂಧಿಕರ ಹೇಳಿಕೆಗಳನ್ನು ಪಡೆದಿದ್ದು, ನಂತರ ದಿನಾಂಕಃ 11.02.2023 ರಂದು ಸಾಯಂಕಾಲ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ.2 ಮತ್ತು 3 ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಮತ್ತು ಅಮಾನತ್ತು ಪಂಚನಾಮೆಯನ್ನು ಬೆಳಗ್ಗೆ 10.15 ರಿಂದ 11.15 ರವರೆಗೆ ಜರುಗಿಸಿರುವುದಾಗಿ, ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಸಮಯದಲ್ಲಿ ಸುಮಾರು 8 ಮೀ ಉದ್ದದ ಕೆಂಪು ಬಣ್ಣದ ವಿದ್ಯುತ್ ವೈರ್ ಗಳನ್ನು ಮತ್ತು 5 ಮೀ ಉದ್ದದ ನೀರಿನ ಪೈಪ್ ಗಳನ್ನು ಅಮಾನತ್ತು ಪಡಿಸಿಕೊಂಡು ಠಾಣಾ ಪಿಎಫ್ ನಂ.12/2023 ರಡಿ, ನೊಂದಾಯಿಸಿಕೊಂಡು, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ, ಸಾಕ್ಷಿ ಗುರುತಿಸಿದ ಕೆಂಪು

ಬಣ್ಣದ ವಿದ್ಯುತ್ ವೈರನ್ನು ಮು.ಮಾ.1 ಎಂದು ಹಾಗೂ ಕಪ್ಪು ಬಣ್ಣದ ನೀರಿನ ಪೈಪ್‌ನ್ನು ಮು.ಮಾ.2 ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆದಿರುವುದಾಗಿ, ಸಾಕ್ಷಿ ಗುರುತಿಸಿದ ಛಾಯಾಚಿತ್ರಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ.4 ರಿಂದ 7, 12 ಮತ್ತು 13 ರವರ ಹೇಳಿಕೆಗಳನ್ನು ಪಡೆದಿರುವುದಾಗಿ, ಅದೇ ದಿನ ಚಾಸಾ.15 ರವರಿಗೆ ಕೃತ್ಯ ನಡೆದ ಸ್ಥಳದಲ್ಲಿ ಮತ್ತು ಕೃತ್ಯ ನಡೆದ ದಿನದ ವಿದ್ಯುತ್ ಸಂಪರ್ಕದ ಬಗ್ಗೆ ವರದಿ ನೀಡಲು ಮನವಿ ಸಲ್ಲಿಸಿರುತ್ತೇನೆ ಎಂದು ಗುರುತಿಸಿ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಆ.3 :

ಪ್ರಶ್ನೆಃ 7 ಫ್ರಾಸಾ.13 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕಃ 18.02.2023 ರಂದು ಚಾಸಾ.14 ರವರಿಗೆ ಕೃತ್ಯ ನಡೆದ ಸ್ಥಳದ ನಕಾಶೆ ಮತ್ತು ವರದಿ ನೀಡಲು ಮನವಿ ಸಲ್ಲಿಸಿರುವುದಾಗಿ, ದಿನಾಂಕಃ 26.02.2023 ರಂದು ಸಿಜಿ ಆಸ್ಪತ್ರೆಯಿಂದ ಬಂದ ಮೃತನ ವರದಿ ಸ್ವೀಕರಿಸಿರುವುದಾಗಿ, ಸಾಕ್ಷಿಯು ಗುರುತಿಸಿದ ಶವ ಪರೀಕ್ಷಾ ವರದಿಯನ್ನು ನಿಪಿ.22 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.22(ಎ) ಎಂದು ಗುರುತಿಸಲಾಯಿತು. ದಿನಾಂಕಃ 20.03.2023 ರಂದು ಚಾಸಾ.15 ರವರಿಂದ ಕೃತ್ಯ ನಡೆದ ಸ್ಥಳದಲ್ಲಿ ಮತ್ತು ಕೃತ್ಯ ನಡೆದ ದಿನದ ವಿದ್ಯುತ್ ಸಂಪರ್ಕದ ಬಗ್ಗೆ ವರದಿ ಸ್ವೀಕರಿಸಿರುವುದಾಗಿ, ಕೃತ್ಯ ನಡೆದ ಸ್ಥಳದಲ್ಲಿ ಮತ್ತು ಕೃತ್ಯ ನಡೆದ ದಿನದ ವಿದ್ಯುತ್ ಸಂಪರ್ಕದ ಬಗ್ಗೆ ವರದಿಯನ್ನು ನಿಪಿ.15 ಎಂದು ಗುರುತಿಸಲಾಗಿದೆ. ದಿನಾಂಕ: 05.04.2023 ರಂದು ಚಾಸಾ.14 ರವರಿಂದ ಸ್ಥಳ ನಕಾಶೆ ಮತ್ತು ವರದಿಯನ್ನು ಸ್ವೀಕರಿಸಿರುವುದಾಗಿ, ಸಾಕ್ಷಿಯು ಗುರುತಿಸಿದ ವರದಿಯನ್ನು ನಿಪಿ.11 ರಿಂದ ನಿಪಿ.13 ಎಂದು ಗುರುತಿಸಲಾಗಿದೆ. ದಿನಾಂಕಃ 06.042023 ರಂದು ಆರೋಪಿತರು ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ, ದಿನಾಂಕಃ 25.06.2023 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದು, ಆರೋಪಿತರನ್ನು ಗುರುತಿಸಿ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಆ.3 :

ಪ್ರಶ್ನೆಃ 8 ಫ್ರಾಸಾ.14 ಡಾ. ಜಿ.ಎಂ.ಮೊಹನ್ ಕುಮಾರ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 08.02.2023 ರಂದು ಚಾಸಾ.17 ರವರ ಮನವಿ ಮೇರೆಗೆ ಮೃತ ವ್ಯಕ್ತಿ ಸಂದೀಪ ತಂದೆ ಪಾಲಾಕ್ಷಪ್ಪ, 34 ವರ್ಷ, ವಾಸಃ ಗೆದ್ದಹಟ್ಟಿ ಗ್ರಾಮ, ಚನ್ನಗಿರಿ ಗ್ರಾಮ ಈತನ ಶವಪರೀಕ್ಷೆಯನ್ನು ಮಾಡಿ ಪಿ ಎಂ ವರದಿ

ನೀಡಿರುವುದಾಗಿ, ಅದೇ ದಿನ ಮದ್ಯಾಹ್ಣ 3.05 ರಿಂದ 4.05 ರವರೆಗೆ ಮೃತನ ಶವಪರಿಕ್ಷೆಯನ್ನು ಮಾಡಿ ಶವ ಪರೀಕ್ಷಾ ವರದಿ ನೀಡಿದ್ದು, ಸಾಕ್ಷಿಯು ಗುರುತಿಸಿದ ಪಿ ಎಂ ವರದಿಯನ್ನು ನಿಪಿ.22 ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು ನಿಪಿ.22(ಬಿ) ಎಂದು ಗುರುತಿಸಲಾಯಿತು. ಸದರಿ ವ್ಯಕ್ತಿಯ ಸಾವಿನ ಕಾರಣವನ್ನು ತಾನು ತನ್ನ ವರದಿಯಲ್ಲಿ ನಮೂದಿಸಿದ್ದು, ಸದರಿ ವ್ಯಕ್ತಿ " Electrocution ಕಾರಣದಿಂದ ತೀರಿಕೊಂಡಿರುವುದಾಗಿ, ದೇಹದ ಮೇಲೆ ಹೊರಭಾಗದ ಗಾಯಗಳ ಬಗ್ಗೆ ತನ್ನ ವರದಿಯಲ್ಲಿ ನಮೂದಿಸಿದ್ದು, ಸದರಿ ಗಾಯಗಳೆಂದರೆ 1. 10 ಅಡಿ ಸಣ್ಣ ಕರುಳಿನ ಭಾಗ 2. ಪಿತ್ತ ಜನಕಾಂಗ, ಮೂತ್ರ ಪಿಂಡಗುಲ್ಮವೆ ಶ್ವಾಸಕೋಶ. ದೇಹದ ಒಳಗಿನ ಅಂಗಾಂಶಗಳು ಅವುಗಳ ಸ್ಥಾನದಲ್ಲಿ ಇದ್ದವು. ಮೃತ ವ್ಯಕ್ತಿ ತೀರಿಕೊಂಡು ಸುಮಾರು 24-34 ಒಳಗೆ ಸಾವು ಸಂಭವಿಸಿತ್ತು ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಆ.3 :

ಪ್ರಶ್ನೆಃ 9 ನೀವು ಏನನ್ನಾದರೂ ಹೇಳಬಯಸುವಿರಾ?

ಉತ್ತರಃ

ಆ.1 :

ಆ.2 :

ಆ.3 :

ಪ್ರಶ್ನೆಃ 10 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ

ಆ.1 :

ಆ.2 :

ಆ.3 :

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ಸಹಿ/-

ದಿನಾಂಕಃ 13.02.2026 ಪ್ರಧಾನ ಸಿವಿಲ್ ನ್ಯಾಯಾಧೀಶರು

ಸ್ಥಳಃ ಹರಿಹರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ.